**<u>ಸಾಕ್ಷಿಯನ್ನು ದಿಃ 05.01.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಬಿ.ಸಿ.ಎಸ್ ವಕೀಲರಿಂದಃ-</u>**

ಹಣ ಕೊಡುತ್ತೇನೆ ಎಂದು ಹೇಳಿ ಕೊಟ್ಟಂತಹ ಚೆಕ್ ನಂ. 000013 ನನ್ನ ಬ್ಯಾಂಕ್ ಖಾತೆಯಲ್ಲಿ ಇತ್ತು. ಸದರಿ ಚೆಕ್ ನ ಜರಾಕ್ಸ್ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದಿರಾ ಎಂದರೆ ಚೆಕ್ ನ ಜರಾಕ್ಸ ತೆಗೆದಿಲ್ಲ, ಆದರೆ ಬ್ಯಾಂಕ್ ಖಾತೆಯ ಸ್ಟೇಟ್ ಮೆಂಟ್ ಅನ್ನು ಹಾಜರು ಪಡಿಸಬಹುದು ಎನ್ನುತ್ತಾರೆ. ಸದರಿ ಚೆಕ್ ಅನ್ನು ಕಾಳನಾಯಕ ಎಂಬುವವರ ಹೆಸರಿಗೆ ಬರೆದುಕೊಟ್ಟಿದ್ದೆ. ಗೃಹ ಕೃತ್ಯದ ಖರ್ಚು ಮತ್ತು ತಮ್ಮ ಕುಟುಂಬವನ್ನು ವಿಭಾಗ ಮಾಡಿಕೊಳ್ಳುತ್ತಿದ್ದು, ಅದರ ಖರ್ಚಿಗಾಗಿ ದಾವಾ ಸ್ವತ್ತನ್ನು ಮಾರಾಟ ಮಾಡುವುದಾಗಿ ಪ್ರತಿವಾದಿಗಳು ಹೇಳಿದ್ದರು. ಸದರಿ ವಿಚಾರವನ್ನು ಅಗ್ರಿಮೆಂಟ್ ನಲ್ಲಿ ಬರೆಸಿರುತ್ತಾರೆ. ಅಗ್ರಿಮೆಂಟ್ ನಲ್ಲಿ "ನಮ್ಮಗಳ ಸೌಖ್ಯಕ್ಕಾಗಿ ಮತ್ತು ನಾವುಗಳು ಮಾಡಿದ ಸಾಲ ತಿರುವಳಿಗಾಗಿ" ಎಂದು ನಮೂದು ಇದೆ ಎಂದರೆ ಸರಿ. ಕರಾರು ಪತ್ರವನ್ನು ಸೃಷ್ಟಿಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಕರಾರು ಮಾಡಿ ಕೊಟ್ಟಿದ್ದರು ಎಂದು ಹೇಳುವ ಸ್ವತ್ತಿನ ಆರ್.ಟಿ.ಸಿಯಲ್ಲಿ ಎಷ್ಟು ಜನರ ಹೆಸರು ಇದೆ ಎಂದು ತಿಳಿದುಕೊಂಡಿದ್ದೇನೆ. ಸದರಿ ಆರ್.ಟಿ.ಸಿಯಲ್ಲಿ ನಮೂದಿಸಿರುವ ವ್ಯಕ್ತಿಗಳ ಒಪ್ಪಿಗೆ ಪಡೆದುಕೊಂಡಿದ್ದಿರಾ ಎಂದರೆ ಸಾಕ್ಷಿ ಒಪ್ಪಿಗೆ ಪಡೆದುಕೊಂಡಿಲ್ಲ ಎನ್ನುತ್ತಾರೆ.

1 ನೇ ಪ್ರತಿವಾದಿ ಕಾಳನಾಯಕ ಅಗ್ರಿಮೆಂಟ್ ಮಾಡಿಕೊಡಲು ಒಪ್ಪಿಕೊಂಡಿದ್ದು, ಉಳಿದ ಆರ್.ಟಿ.ಸಿಯಲ್ಲಿ ಕಾಣಿಸಿರುವ ಖಾತೆದಾರರಿಗೆ ಏನಾದರೂ ತಕರಾರು ಇತ್ತಾ ಎಂದು ನೋಟೀಸು ಕೊಟ್ಟಿಲ್ಲ. ಸದರಿ ಜಮೀನು ಎಸ್.ಸಿ, ಎಸಿ.ಟಿ ಜಮೀನು ಆಗಿರುತ್ತದೆ ಎಂದರೆ ಸರಿ. ಕ್ರಯ ಪತ್ರ ಮಾಡಿಕೊಡಬೇಕಾದರೆ ಸರ್ಕಾರದ ಅನುಮತಿ ಪಡೆದುಕೊಳ್ಳಬೇಕು ಎಂಬ ವಿಚಾರವನ್ನು ಕರಾರು

ಪತ್ರದಲ್ಲಿ ಬರೆಸಿಲ್ಲ. ಆರ್.ಟಿ.ಸಿಯಲ್ಲಿ ಪಿತ್ರಾರ್ಜಿತ ಆಸ್ತಿಯೆಂದು ನಮೂದಿಸಿದ ಕಾರಣ 1 ನೇ ಪ್ರತಿವಾದಿ ಒಬ್ಬರೆ ಕರಾರು ಬರೆದು ಕೊಡಲು ಅಧಿಕಾರ ಇರಲಿಲ್ಲ ಎಂದರೆ ಸಾಕ್ಷಿ 1 ನೇ ಪ್ರತಿವಾದಿಯ ಭಾಗದಲ್ಲಿ ಇರುವುದನ್ನು ಮಾತ್ರ ನಾನು ಖರೀದಿ ಮಾಡಲು ಒಪ್ಪಿದ್ದೆ ಎನ್ನುತ್ತಾರೆ. ದಾವಾ ಸ್ವತ್ತಿನ ಸ್ವಾಧೀನದಲ್ಲಿ 1 ನೇ ಪ್ರತಿವಾದಿ ಒಬ್ಬರೆ ಇದ್ದಾರೆ ಎಂದು ತೋರಿಸಲು ಜಂಟಿಯಲ್ಲಿ ಇರುವ ಆರ್.ಟಿ.ಸಿ ಹಾಜರು ಪಡಿಸಿದ್ದೇನೆ ಎನ್ನುತ್ತಾರೆ. ಆರ್.ಟಿ.ಸಿಯಲ್ಲಿ ನಮೂದು ಇರುವಂತೆ ಸದರಿ ದಾವಾ ಸ್ವತ್ತಿನಲ್ಲಿ ಜಂಟಿ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಕ್ರಯ ಪತ್ರ ಮಾಡಿಕೊಳ್ಳಲು ಅಗತ್ಯ ದಾಖಲೆಗಳನ್ನು ಪಡೆದುಕೊಂಡ ನಂತರ ಕ್ರಯ ಪತ್ರ ಮಾಡಿಕೊಡಲು ಒಪ್ಪಲಾಗಿದೆ ಎಂದರೆ ಸರಿ. ಹಾಗೆ ಕ್ರಯ ಪತ್ರ ಮಾಡಿಕೊಡಲು ಅಗತ್ಯ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದಿರಾ ಎಂದರೆ ಸಾಕ್ಷಿ ಪ್ರತಿವಾದಿ ದಾಖಲೆ ಮಾಡಿಸಿಕೊಟ್ಟಿಲ್ಲ, ಹಾಗೆ ಕ್ರಯ ಪತ್ರ ಮಾಡಿಸಿಕೊಡಲು ಬರದ ಕಾರಣ ಈ ದಾವೆ ಹಾಕಿದ್ದೇನೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ಯಾವುದೆ ಕರಾರು ಪತ್ರ ಬರೆದುಕೊಟ್ಟಿರಲಿಲ್ಲ, ಕಾಳನಾಯಕ ರವರಿಗೆ ಹುಷಾರಿಲ್ಲದ ಕಾರಣ ಸಾಲ ತೆಗೆದುಕೊಂಡಿದ್ದು, ಅದರ ಉಪಯೋಗ ಪಡೆದುಕೊಂಡು ಅಗ್ರಿಮೆಂಟ್ ಎಂದು ನಾನು ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ.

ನಾನು ಕಂಸ್ಟ್ರಕ್ಷನ್ ಡಿಪಾರ್ಟಮೆಂಟ್ ನಲ್ಲಿ ಕೆಲಸ ಮಾಡುತ್ತೇನೆ. ಇದೆ ರೀತಿ ಮೋಸದಿಂದ ಜಮೀನುಗಳನ್ನು ಖರೀದಿ ಮಾಡಿ, ಲೇ ಔಟ್ ಮಾಡಲು ಜಮೀನುಗಳನ್ನು ಖರೀದಿ ಮಾಡುತ್ತಿರುತ್ತೇನೆ ಎಂದರೆ ಸರಿಯಲ್ಲ. ಆದರೆ ನಾನು ಕೃಷಿ ಮಾಡಲು ಜಮೀನು ತೆಗೆದುಕೊಳ್ಳಲು ಅಗ್ರಿಮೆಂಟ್ ಮಾಡಿಸಿ ಕೊಟ್ಟಿದ್ದೆ ಎನ್ನುತ್ತಾರೆ. ಕೃಷಿ ಮಾಡುತ್ತೇನೆ ಎಂದು ತೋರಿಸಲು ದಾಖಲೆ ಹಾಜರು ಪಡಿಸಿಲ್ಲ ಎಂದರೆ ಆರ್.ಟಿ.ಸಿ ಹಾಜರು ಪಡಿಸಿದ್ದೇನೆ ಎಂದು ನುಡಿಯುತ್ತಾರೆ. ಅಗ್ರಿಮೆಂಟ್ ಮಾಡಿಸಿಕೊಳ್ಳುವ ಕಾಲಕ್ಕೆ ನೋಟರಿ ರವರ ಮುಂದೆ ದಾವಾ ಸ್ವತ್ತಿನ ಆರ್.ಟಿ.ಸಿಯನ್ನು ಕೊಟ್ಟಿದ್ದರು. ಹಾಗೆ ಆರ್.ಟಿ.ಸಿಯನ್ನು

ಕೊಟ್ಟ ನಂತರ ಅದರಲ್ಲಿ ನಮೂದಿಸಿರುವ ಖಾತೆದಾರರನ್ನು ಅಗ್ರಿಮೆಂಟ್ ನಲ್ಲಿ ಸೇರಿಸಬೇಕು ಎಂದು ನೋಟರಿ ರವರು ಹೇಳಿದ್ದರೊ ಇಲ್ಲವೊ ನನಗೆ ಗೊತ್ತಿಲ್ಲ. ಸದರಿ ಅಗ್ರಿಮೆಂಟ್ ಅನ್ನು ನಾನೆ ಸೃಷ್ಟಿಸಿಕೊಂಡು ನಂತರ ನೋಟರಿ ರವರ ಮುಂದೆ ಕೇವಲ ಸಹಿ ಹಾಕಿದ್ದೆ ಎಂದರೆ ಸರಿಯಲ್ಲ. ನೋಟರಿ ಕಛೇರಿಯಲ್ಲಿ ಎಲ್ಲರೂ ಬಂದು ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಜಂಟಿ ಹೆಸರಿನಲ್ಲಿ ಇರುವ ಕಾರಣ 1 ನೇ ಪ್ರತಿವಾದಿ ಒಬ್ಬರಿಗೆ ಯಾವುದೆ ಅಗ್ರಿಮೆಂಟ್ ಮಾಡಿಸಿ ಕೊಡಲು ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ಯಾವುದೆ ಕರಾರು ಪತ್ರ ಬರೆದುಕೊಡದಿದ್ದರೂ ಅದನ್ನು ನಾನೆ ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.